**ಪಿ. ಡಬ್ಲ್ಯೂ: 1**

**( ಇಂದು ದಿಃ 31 /01/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀಮತಿ ಎನ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 27 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ.

ಆಸ್ತಿ ಅಡಮಾನ ಸಾಲವನ್ನು ಜೋಗು ತಿಮ್ಮ ಪೂಜಾರಿ ಇವರಿಗೆ ಶಿರೂರು ಶಾಖೆಯಲ್ಲಿ ನೀಡಿರುತ್ತೇವೆ. ಸಾಲದ ಅರ್ಜಿಯನ್ನು ದಿಃ 01.12.2021 ರಂದು ನೀಡಿರುತ್ತಾರೆ. ದಿಃ 04.01.2022 ರಂದು ರೂ 5 ಲಕ್ಷ ಸಾಲ ಮಂಜೂರಿ ಆಗಿದೆ. ಸದರಿ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ಸದರಿ ಪ್ರಕರಣದ ಆರೋಪಿತನು ದಿಃ 10.02.2023 ರಂದು ಚೆಕ್ಕನ್ನು ರಿಕವರಿಗೆ ಹೋದಾಗ ನೀಡಿದ್ದಾರೆ. ಚೆಕ್ಕನ್ನು ಆರೋಪಿಯೇ ಬರೆದು ನೀಡಿರುತ್ತಾರೆ. ಸಾಲಗಾರನು ಕೇವಲ ರೂ. 15,000 ಮೊತ್ತವನ್ನು ತುಂಬಿದ್ದಾರೆ. ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಕೆಡಿಸಿಸಿ ಬ್ಯಾಂಕಿನಲ್ಲಿ ಹಾಕಿದ್ದು ಅದು ಸಾಕಷ್ಟು ಹಣ ಇಲ್ಲದ ಕಾರಣ ಚೆಕ್ಕು ಅಮಾನ್ಯಗೊಂಡಿದೆ. ಭದ್ರತೆಗಾಗಿ ನೀಡಿದ ಚೆಕ್ಕನ್ನು ಉಪಯೋಗಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**